**ಓ.ಎಸ್. ನಂ. 331/2016 ಡಿ.ಡಬ್ಲೂ-2 ಹೆಸರು - ನರಸಿಂಹೇಗೌಡ**

**ಸಾಕ್ಷಿಯನ್ನು ದಿನಾಂಕಃ 25.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಆರ್ ವಕೀಲರಿಂದಃ-**

ನನ್ನ ಸ್ವಂತ ಗ್ರಾಮ ದೇವರಸನಹಳ್ಳಿ. ನಾನು ವಿದ್ಯಾಭ್ಯಾಸ ಮಾಡಿಲ್ಲ. ವಾದಿ ಬೋರೇಗೌಡರವರ ಮಗ. ಬೋರೇಗೌಡರ ತಂದೆಯ ಹೆಸರು ಲಕ್ಕೇಗೌಡ. ಲಕ್ಕೇಗೌಡ ಮತ್ತು ಸಣ್ಣೇಗೌಡ ಅಣ್ಣತಮ್ಮಂದಿರು ಎಂದರೆ ಸರಿ. ಸಣ್ಣೇಗೌಡರಿಗೆ ಒಂದೇ ಹೆಸರು ಇತ್ತು. ಅವರಿಗೆ ಯಾವುದೇ ಉಪ ನಾಮ ಇರಲಿಲ್ಲ. ಬೋರೇಗೌಡ ಮತ್ತು ಸಣ್ಣೇಗೌಡರಿಗೆ ಎಷ್ಟು ಆಸ್ತಿಗಳು ಇತ್ತು ಎಂದು ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಗೊತ್ತಿಲ್ಲ. ವಾದಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತನ್ನು ವಾದಿಯ ತಂದೆ ಪೂರ್ವದಿಂದಲೂ ಗೇಣಿದಾರನಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿ ಅಣ್ಣ ತಮ್ಮಂದಿರಿಬ್ಬರೂ ಸಾಗುವಳಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಬೋರೇಗೌಡ ಮತ್ತು ಸಣ್ಣೇಗೌಡರವರು ಅವರ ಕುಟುಂಬದ ಸ್ವತ್ತುಗಳನ್ನು ಯಾವಾಗ ವಿಭಾಗ ಮಾಡಿಕೊಂಡರು ಎಂದು ಗೊತ್ತಿಲ್ಲ.

2. ಬೋರೇಗೌಡರ ಹೆಂಡತಿಯ ಹೆಸರು ಮಾದಮ್ಮ, ಅವರನ್ನು ಸಣ್ಣಮ್ಮ ಎಂದು ಕರೆಯುತ್ತಿರಲಿಲ್ಲ. ಬೋರೇಗೌಡರ ಮರಣದ ನಂತರ ಸಣ್ಣಮ್ಮರವರಿಗೆ ದಾವಾ ಸ್ವತ್ತಿನ ಕುರಿತು ಹಕ್ಕು ಬಂದಿದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸಣ್ಣಮ್ಮರವರ ಜಮೀನನ್ನು ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿಯಿಂದ ದಾವಾ ಸ್ವತ್ತಿನ ಕುರಿತು ಬೋರೇಗೌಡರ ಪತ್ನಿಯಾದ ಸಣ್ಣಮ್ಮರವರಿಗೆ ಮಂಜೂರಾತಿ ಮಾಡಿದ್ದರು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಸಣ್ಣಮ್ಮರವರ ಮರಣದ ನಂತರ ವಾದಿ ಮತ್ತು ಆತನ ಕುಟುಂಬದವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ಎಷ್ಟು ವಿಸ್ತೀರ್ಣದ ಸ್ವತ್ತಿನ ಕುರಿತು ಸಾಗುವಳಿ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದಿ ಸಾಗುವಳಿ ಮಾಡುವುದನ್ನು ನಾನು ನೇರವಾಗಿ ನೋಡಿಲ್ಲ. ಪ್ರತಿವಾದಿ ಇಟ್ಟಿಗೆ ಕಾರ್ಖಾನೆಯನ್ನು ಹೊಂದಿದ್ದು, ರಾಜಕೀಯವಾಗಿ ಸಕ್ರಿಯವಾಗಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ನನಗೆ ಹಣಕಾಸಿನ ತೊಂದರೆ ಇದ್ದಾಗ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ವಿಶ್ವಾಸದಿಂದ ಇದ್ದೇವೆ ಎಂದರೆ ಎಲ್ಲರೂ ಚೆನ್ನಾಗಿದ್ದೇವೆ ಎಂದು ಹೇಳುತ್ತಾರೆ. ವಾದಿಯ ಸಹೋದರನಾದ ನಾರಾಯಣರವರ ಮಗ ಶ್ಯಾಮ್ ಗೊತ್ತು. ದಾವಾ ಸ್ವತ್ತನ್ನು ಸದರಿ ಶ್ಯಾಮ್ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಗೊತ್ತಿಲ್ಲ.

3. ಬೋರೇಗೌಡರ ಹೆಂಡತಿಯಾದ ಮಾದಮ್ಮರವರಿಗೆ ಸಣ್ಣಮ್ಮ ಎಂದ ಅಡ್ಡ ಹೆಸರು ಇತ್ತು ಎಂದರೆ ಸರಿಯಲ್ಲ. ಮಾದಮ್ಮ ಯಾನೆ ಸಣ್ಣಮ್ಮ ಒಬ್ಬರೇ ಎಂದರೆ ಸರಿಯಲ್ಲ. ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳುವ ಸ್ವತ್ತಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕು ಬಂಧಿ ಗೊತ್ತಿಲ್ಲ. ಈ ದಾವೆಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದಾಗ್ಯೂ ವಾದಿಯ ಸ್ವಾಧೀನತೆಯಲ್ಲಿರುವ ಜಮೀನನ್ನು ಆತನ ತಮ್ಮನ ಮಗನಾದ ಶ್ಯಾಮ್ ರವರು ಸಾಗುವಳಿ ಮಾಡುತ್ತಿದ್ದಾಗ್ಯೂ ವಾದಿಗೆ ವಿರುದ್ದವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷ್ಯದ ಪ್ರಮಾಣ ಪತ್ರವನ್ನು ಪ್ರತಿವಾದಿಯ ಹೇಳಿಕೆಯಂತೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಿಸಿದಂತೆ ದಾವಾ ಸ್ವತ್ತಿನ ಕುರಿತು ಯಾವುದೇ ದಾಖಲಾತಿಯನ್ನು ನೋಡಿಲ್ಲ. ವಾದಿ ನನ್ನೊಂದಿಗೆ ವಿಶ್ವಾಸದಿಂದ ಇಲ್ಲದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**